ಇ) ಮತ್ತು ಈ) ತಡೆಯಾಜ್ಞೆಯನ್ನು ತೆರವು ಮಾಡಲು ನಗರ ಪಾಲಿಕೆಯು ಅರ್ಜಿಯನ್ನು ಸಲ್ಲಿಸಿದೆ. ನ್ಯಾಯಾಲಯವು ಆ ಅರ್ಜಿಯನ್ನು ವಿಚಾರಿಸಿದನಂತರ ತಡೆಯಾಜ್ಞೆಯನ್ನು ಕೆಲವು ಬದಲಾವಣೆಗಳೊಂದಿಗೆ ದಿನಾಂಕ ೨೮–೨–೧೯೮೬ ರಂದು ಖಚಿತ ಪಡಿಸಿದೆ.

ಜೆ.ಪಿ. ನಗರ 2,4,5 ಮತ್ತು 6ನೇ ಫೇಸ್ ಪ್ರದೇಶವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಶದಿಂದ ಬೆಂಗಳೂರು ಮಹಾನಗರ ಪಾಲಿಕೆ ವಶಕ್ಕೆ ಬಿಟ್ಟುಕೊಟ್ಟಿರುವ ಆ ಪ್ರದೇಶದಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತಿನಿಧಿಯನ್ನು ಆಯ್ಕೆ ಮಾಡುವ ಕುರಿತು.

೧೮೨. ಶ್ರೀ ಬಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೆ. ಪಿ ನಗರ ೨,೪,೫, ಮತ್ತು ೬ ಫೇಸ್ ಬಡಾವಣೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಿಡಿತದಲ್ಲಿರುವುದು ನಿಜವೇ?

ಆ) ಈ ಬಡಾವಣೆಗಳು ೧೦ ವರ್ಷಗಳ ಹಿಂದಿಯೇ ರಚಿಸಲಾಗಿದ್ದು ಹಾಗೂ ಪೂರ್ತಿಯಾಗಿ ಅಭಿವೃದ್ಧಿ ಹೊಂದಿರುವುದು ನಿಜವಲ್ಲವೇ?

ಇ) ಬೆಂಗಳೂರು ಮಹಾನಗರ ಪಾಲಿಕೆಗೆ ಸದಸ್ಯರನ್ನು ಚುನಾಯಿಸಲು ಸದರಿ ಬಡಾವಣೆಯ ನಿವಾಸಿಗಳು ಅರ್ಹರಲ್ಲವೇ?

ಈ) ಮುಂಬರುವ ಚುನಾವಣೆಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಸದಸ್ಯರನ್ನು ಪ್ರತಿನಿಧಿಸಲು ಮೇಲ್ಕಂಡ ಬಡಾವಣೆಯನ್ನು ಮಹಾನಗರ ಪಾಲಿಕೆಗೆ ಪರಿಸಿಕೊಡಬಹುದೇ ?

ಶ್ರೀ ಆರ್. ವಿ. ದೇಶಪಾಂಡೆ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ ಹೌದು.

ಆ) ಹೌದು.

ಇ) ಇಲ್ಲ.

ಈ) ಪರಿಶೀಲಿಸಲಾಗುವುದು.

ಮಂಡಲ ಪಂಚಾಯತಿಗಳಲ್ಲಿರುವ ಖಾಲಿ ಸ್ಥಾನಗಳು

೧೮೩. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಡಲ ಪಂಚಾಯತ್‌ಗಳಲ್ಲಿ ಎಷ್ಟು ಕಾರ್ಯದರ್ಶಿಗಳ ಸ್ಥಾನ ಖಾಲಿ ಇದೆ?

ಆ) ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೧೬ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಆ) ಕಂದಾಯ ಇಲಾಖೆಯನ್ನು ತನ್ನ ಇಲಾಖೆಯ ನೌಕರರ ಸೇವೆಯನ್ನು ನಿಯೋಜಿಸಲು ಕೋರಲಾಗಿದೆ. ನೌಕರರನ್ನು ನಿಯೋಜಿಸಿದ ಕೂಡಲೇ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಕ್ರಮ ಸಂಖ್ಯೆ	ಮಂಡಲ ಪಂಚಾಯತಿ ಹೆಸರು	ಯಾವ ದಿನಾಂಕದಿಂದ ಖಾಲಿ ಇವೆ	
೧	ಕೊಲ್ಲೂರು ಮಂಡಲಪಂಚಾಯಿತಿ	೧೯-೧೯೮೮	(—)
೨	ನಾವುಂದ	೧೭-೧೦-೧೯೮೮	
೩	ಮಳಲಿ	೧೧-೧-೧೯೮೯	
೪	ಅಲೆಟ್ಟಿ	೨೯-೧೦-೧೯೮೮	
೫	ಹರಿಹರ ಪಲ್ಲತಡ್ಕ	೨೯-೧೦-೧೯೮೮	
೬	ಸುಳ್ಯ	೨-೧-೧೯೮೯	
೭	ಆಲಂಕಾರು	೧೬-೭-೧೯೮೮	
೮	ವಾಮನ ಪದವು	ಆಕ್ಟೋಬರ್ ೮೮	
೯	ಸರಪಾಡಿ	೧-೪-೧೯೮೭	
೧೦	ಕುರ್ನಾಡು	೧೬-೮-೧೯೮೮	
೧೧	ಮುಡೂರು	ಡಿಸೆಂಬರ್ ೧೯೮೮	
೧೨	ತಣ್ಣೀರುಪಂಥ	೨೩-೭-೧೯೮೮	
೧೩	ಉಜಿರೆ	೯-೮-೧೯೮೮	
೧೪	ಕಣಿಯೂರು	೧-೪-೧೯೮೭	
೧೫	ನೆರಿಯ	೧-೪-೧೯೮೭	
೧೬	ಬಳಂಜ	೧೭-೬-೧೯೮೮	

ರಾಜ್ಯದಲ್ಲಿ ಖಾಸಗಿ ಕಾನೂನು ಕಾಲೇಜುಗಳಿಗೆ ಚೆಕ್ ಮೂಲಕ ವೇತನ ಪಾವತಿ ಮಾಡುತ್ತಿರುವ ಬಗ್ಗೆ

೧೫೩. ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ರಾಜ್ಯದಲ್ಲಿ ಖಾಸಗಿ ಕಾನೂನು ಕಾಲೇಜುಗಳಿಗೆ ಚೆಕ್ ಮೂಲಕ ವೇತನ ಪಾವತಿ ಮಾಡುವಲ್ಲಿ ಅಧಿಕಾರ ದುರಪಯೋಗವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

೨) ಹಾಗಿದ್ದಲ್ಲಿ, ಈ ದುರುಪಯೋಗ ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).—

೧) ಇಲ್ಲ.

೨) ಉದ್ಭವಿಸುವುದಿಲ್ಲ.

1987ರ ಸಾಲಿನಲ್ಲಿ ಬಿಡುಗಡೆಯಾಗ ಬೇಕಾಗಿದ್ದ ಬೆಳೆಸಾಲ ವಿಮಾ ಯೋಜನೆ

೧೧೧. ಶ್ರೀ ಸಿ. ಎಂ. ಉದಾಸಿ. (ಹಾನಗಲ್)—ಮಾನ್ಯ ಕೃಷಿ ಸಚಿವರು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭ರ ಸಾಲಿನಲ್ಲಿ ಬೆಳೆ ಸಾಲ ವಿಮಾ ಯೋಜನೆಯಡಿಯಲ್ಲಿ ಮಂಜೂರಾದ ಹಣ ಬಿಡುಗಡೆ ಮಾಡಲು ವಿಳಂಬವಾಗುತ್ತಿರಲು ಕಾರಣಗಳೇನು?

ಆ) ೧೯೮೭ರಲ್ಲಿಯೇ ಬಿಡುಗಡೆಯಾಗಬೇಕಾಗಿದ್ದ ವಿಮಾ ಹಣವನ್ನು ಇದುವರೆವಿಗೂ ಕೊಡದೆ ಇರುವುದರಿಂದ ರೈತರ ಸಾಲಕ್ಕೆ ಬಡ್ಡಿ ವಿಧಿಸದಂತೆ ಕ್ರಮ ಕೈಗೊಳ್ಳಲಾಗುವುದೆ?